ನಮ್ಮೆಲ್ಲರ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಏನು ತೊಂದರೆಯಿಲ್ಲ. ಹಾಗೆಯೇ ಮಾಡೋಣವೇಕೆಂದು ನಾನು ಸೂಚಿಸುತ್ತಿದ್ದೇನೆ.

ಅಧ್ಯಕ್ಷರು: ಮುಂದಿನ ಎರಡು ಪ್ರಶ್ನೆಗಳನ್ನು ಮುಂದಿನ ಶನಿವಾರದೊಳಗೆ ತೆಗೆದುಕೊಳ್ಳುತ್ತೇನೆ. ಈಗಾಗಲೇ ಪ್ರಶ್ನೋತ್ತರ ವೇಳೆ ಶುರುವಾಗಿ ಒಂದು ಗಂಟೆ 20 ನಿಮಿಷಗಳಾಗಿದೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ(i): ವಿರೋಧ ಪಕ್ಷದ ಸದಸ್ಯರುಗಳಿಗೆ ಬಜೆಟ್ ಭಾಷಣದ ಮೇಲೆ ಮಾತನಾಡಲು ಹೆಚ್ಚಿನ ಸಮಯ ನಿಗದಿ ಮಾಡುವ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ವಿರೋಧಪಕ್ಷದ ಉಪ ನಾಯಕರು): ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಎಲ್ಲ ವಿಪಕ್ಷಗಳವರ ಪರವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ತಾವು ಈಗಾಗಲೇ ನಾವು ಮಾತನಾಡಲಿಕ್ಕೆ ಸಮಯವನ್ನು ನಿಗದಿಮಾಡಿ ಪತ್ರವನ್ನು ಕಳುಹಿಸಿಕೊಟ್ಟಿದ್ದೀರಿ.

Mr. Speaker: This is my proposal

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಆ ಪ್ರಪೋಸಲ್ಸ್ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಈಗ ನಮ್ಮಲ್ಲಿ ಹೇಳಲಿಕ್ಕೆ ಇಷ್ಟಪಡುವುದೇನೆಂದರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಾವು ಮಾತನಾಡಲಿಕ್ಕೆ ಕಾಲಾವಕಾಶ ಸಿಕ್ಕಿದ್ದು ಬಹಳ ಕಡಿಮೆ. ಕೇವಲ ಮೂರು ಗಂಟೆಗಳ ಕಾಲ ಚರ್ಚೆಯಾಗಿದೆ. ಅದು ತಮ್ಮ ಗಮನಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಮಾತನಾಡಬೇಕೆಂದು ತಾವೂ ಕೂಡ ಹೇಳಿದ್ದೀರಿ. ನಾವು ಮಾತನಾಡಲಿಕ್ಕೆ ಅವಕಾಶ ಕಡಿಮೆಯಿತ್ತು ಎನ್ನುವುದು ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ನಿಮ್ಮ ಮನಸ್ಸಿನಲ್ಲಿರುವ ವಿಚಾರವನ್ನು ಹೇಳಿದ್ದೀರಿ. ನಾವು ಒಪ್ಪಿಕೊಂಡಿದ್ದೇವೆ, ಅದರ ಪ್ರಕಾರ ನಡೆದುಕೊಂಡಿದ್ದೇವೆ. ರಾಜ್ಯಪಾಲರ ಭಾಷಣ ಆದಮೇಲೆ ಈಗ ಬಜೆಟ್ ಭಾಷಣ ಬಂತು. ಇದು ಅತ್ಯಂತ ಪ್ರಾಮುಖ್ಯವಾದ ವಿಚಾರ. ಈಗಾಗಲೇ ಮೂರು ಗಂಟೆಗಳ ಕಾಲ ಚರ್ಚೆಯಾಗಿದೆ. ನಾನು ಒಂದು ಗಂಟೆ, ಮಾನ್ಯ ಎಸ್.ಎಸ್. ಪಾಟೀಲರು ಒಂದು ಗಂಟೆ, ರಾಮಯ್ಯನವರು ಒಂದು ಗಂಟೆ ಸಮಯವನ್ನು ಹಂಚಿಕೊಂಡಿದ್ದೇವೆ. ಈಗ ತಾವೊಂದು ಪ್ರಪೋಸಲ್ಸ್ ನಮಗೆ ಕಳುಹಿಸಿಕೊಟ್ಟಿದ್ದೀರಿ. ಆಡಳಿತ ಪಕ್ಷದವರಿಗೆ ಸುಮಾರು ನಾಲ್ಕು ಗಂಟೆ ಕಾಲ. ಭಾರತೀಯ ಜನತಾ ಪಕ್ಷದವರಿಗೆ ಎರಡೂವರೆ ಗಂಟೆ ಕಾಲ. ಜೆ.ಡಿ.ಯುಗೆ ಎರಡು ಗಂಟೆ, ಜೆ.ಡಿ.ಎಸ್‌ಗೆ ಅರ್ಧಗಂಟೆ, ಮತ್ತು ಪಕ್ಷೇತರರಿಗೆ ಎರಡು ಗಂಟೆಯೆಂದು ಸಮಯ ನಿಗದಿ ಮಾಡಿದ್ದೀರಿ. ನನ್ನ ವಿನಂತಿ ಏನೆಂದರೆ, ಬಜೆಟ್ ಭಾಷಣವಿರಲಿ ಏನೇ ಇರಲಿ ಕೂಲಂಕಷವಾದ ಸಲಹೆ ಸೂಚನೆಗಳನ್ನು ಕೊಡುವಂತಹ ಹೆಚ್ಚಿನ ಜವಾಬ್ದಾರಿ ವಿಪಕ್ಷಕ್ಕೆ ಸೇರಿದವರಿಗೆ ಇರುತ್ತದೆ. ನಾನು ಕೆಲವು ಬಜೆಟ್‌ಗಳನ್ನು ಕಂಡಿದ್ದೇನೆ. ನಾನು ಯಾವುದೇ ರೀತಿಯ ಆಪಾದನೆಯನ್ನು ಮಾಡುತ್ತಿಲ್ಲ.

ಆಡಳಿತ ಪಕ್ಷದವರು ಯಾವುದೇ ಸಂದರ್ಭದಲ್ಲಿ ಕೂಡ ಬಜೆಟ್ ಮಂಡನೆ ಮಾಡಿದಾಗ ಹೆಚ್ಚಿಗೆ ಮಾತನಾಡಲಿಲ್ಲ. ವಿರೋಧ ಪಕ್ಷದವರು ಎಲ್ಲೆಲ್ಲಿ ಏನೇನು ಸರಿಯಾಗಿ ಆಗಬೇಕು ಎಂದು ಹೇಳುವಂತಹ ವಿಚಾರಗಳನ್ನು ಕನ್‌ಸ್ಟ್ರಕ್ಟಿವ್ ಸಲಹೆ ಸೂಚನೆಗಳನ್ನು ಕೊಡುವಂತಹ ಪ್ರಯತ್ನಗಳನ್ನು ಮಾಡಿದ್ದಾರೆ. ಈಗತಾನೇ ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಈ ವಿಚಾರವನ್ನು ಮಾತನಾಡಿದ್ದೇನೆ. ನಮ್ಮ ಅಧ್ಯಕ್ಷರು ಸರಿಯಾಗಿ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂದು ಹೇಳುವುದಕ್ಕೆ ಪೂರ್ಣಭಾವಿಯಾಗಿ ಹೇಗೆ ಮಾತನಾಡಬೇಕೆಂದು ನಮಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆದರಲ್ಲಿ ಆಡಳಿತ ಪಕ್ಷದವರಿಗೆ ನಾಲ್ಕು ಗಂಟೆಗಳು ಸುದೀರ್ಘವಾಗಿ ಅವಕಾಶ ಸಿಕ್ಕಿದೆ. ಪ್ರಾಯಶಃ ತಾವು ಸಮರ್ಪಕವಾಗಿದ್ದೀರಿ, ಒಳ್ಳೆಯ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಅಗು ಹೋಗುಗಳ ಬಗ್ಗೆ ಚಿಂತನೆ ಮಾಡಿದ್ದೀರಿ. ನಿಮ್ಮ ಪಕ್ಷದ ಪರವಾಗಿ ಕೂಡ ನೀವು ಚರ್ಚೆಯನ್ನು ಮಾಡಿಕೊಂಡಿದ್ದೀರಿ. ಆದಕಾರಣ ನಿಮಗೆ ಕೊಟ್ಟಿರುವ ನಾಲ್ಕು ಗಂಟೆ ಅವಧಿಯನ್ನು ಎರಡು ಗಂಟೆಗೆ ಸೀಮಿತ ಮಾಡಿ ಎರಡು ಗಂಟೆಗಳ ಅವಧಿಯನ್ನು ವಿರೋಧ ಪಕ್ಷಗಳಿಗೆ ಕೊಡಬೇಕೆಂದು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ನನ್ನ ವಿನಂತಿ ಇಷ್ಟೆ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಬಹಳಷ್ಟು ಸುದೀರ್ಘವಾಗಿ ಚರ್ಚೆ ಮಾಡಲಿಕ್ಕೆ ವಿರೋಧ ಪಕ್ಷಗಳಿಗೆ ಅವಕಾಶವಾಗಲಿಲ್ಲ. ಬಜೆಟ್ ಭಾಷಣದ ಮೇಲೆ ಮಾತನಾಡಲಿಕ್ಕೆ ಕೇವಲ ಎರಡು ಗಂಟೆ ಅವಕಾಶ ಕೊಟ್ಟರೆ ಹೇಗೆ? ಹೆಚ್ಚಿನ ಸದಸ್ಯರು ಹೊಸ ಹೊಸ ವಿಚಾರಗಳನ್ನು ಸರ್ಕಾರಕ್ಕೆ ಸಲಹೆ ಸೂಚನೆಗಳ ಮುಖಾಂತರ ಕೊಡಬೇಕೆನ್ನುವ ವಿಚಾರದಲ್ಲಿದ್ದಾರೆ. ದಯವಿಟ್ಟು ತಾವು ಮತ್ತೊಮ್ಮೆ ವಿರೋಧ ಪಕ್ಷಗಳಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಹೇಳುವಂತಹ ವಿನಂತಿಯನ್ನು ಎಲ್ಲ ವಿರೋಧ ಪಕ್ಷಗಳವರ ಪರವಾಗಿ ನಾನು ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ತಮ್ಮ ಸಲಹೆಯನ್ನು ಪುನರ್ ವಿಮರ್ಶಿಸೋಣ.

12.40 ಪಿ.ಎಂ

ವಿಷಯ(ii): ಚಿಂಚೋಳಿ ತಾಲ್ಲೂಕಿನಲ್ಲಿರುತಕ್ಕಂಥ ಬಂಜಾರ ಸಮಾಜದ ತಾಂಡಾಗಳಲ್ಲಿ ಕಳೆದ ಐದಾರು ವರ್ಷಗಳಿಂದ ಹೆಣ್ಣು ಮಕ್ಕಳ ಮಾರಾಟ ಆಗುತ್ತಿರುವ ವ್ಯವಹಾರದ ಬಗ್ಗೆ ಪತ್ರಿಕಾ ವರದಿ ಬಂದಿರುವುದು.

ಅಧ್ಯಕ್ಷರು: ಹೊಸ ಸದಸ್ಯರಿಗೆ ನಾನು ಇನ್ನೂ ಅವಕಾಶ ಕೊಟ್ಟಿಲ್ಲ. ಕೈಲಾಸನಾಥ ಪಾಟೀಲರು ಶೂನ್ಯವೇಳೆಯಲ್ಲಿ ಮುಖ್ಯವಾದ ವಿಷಯ ಪ್ರಸ್ತಾಪ ಮಾಡಲಿದ್ದಾರೆ. ಅವರು ಇದುವರೆಗೂ ಮಾತನಾಡಿಲ್ಲ.

+ ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ಶೂನ್ಯವೇಳೆಯಲ್ಲಿ ನಾನು ಪತ್ರಿಕೆ ಮುಖಾಂತರ ಬೆಳಕಿಗೆ ಬಂದಂಥ ನಮ್ಮ ತಾಲ್ಲೂಕಿನ ಒಂದು ದಾರುಣವಾದ ಕತೆಯನ್ನು ಈ ಸದನದ ಮುಂದೆ ಮತ್ತು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರ ಗಮನಕ್ಕೆ ತರುವುದಕ್ಕೆ ನಾನು ನಿಂತಿದ್ದೇನೆ. ಚಿಂಚೋಳಿ ತಾಲ್ಲೂಕಿನಲ್ಲಿ ಇರತಕ್ಕಂಥ ಈ ಬಂಜಾರ ಸಮಾಜದ ತಾಂಡಾಗಳಲ್ಲಿ ಕಳೆದ ಐದಾರು ವರ್ಷಗಳಿಂದ ನಡೆಯುತ್ತಿರತಕ್ಕಂಥ ಈ ವ್ಯವಹಾರದ ಬಗ್ಗೆ ಈ ಪತ್ರಿಕಾ ವರದಿ ಬೆಳಕು ಚೆಲ್ಲಿದೆ. ಈ ಐದಾರು ವರ್ಷಗಳಿಂದ ಈ